ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೬**

# ಕರ್ನಾಟಕ ವಿಧಾನಸಭೆ

**ಹದಿನಾರನೇ ವಿಧಾನಸಭೆ**

**ನಾಲ್ಕನೇ ಅಧಿವೇಶನ**

**ಮಂಗಳವಾರ, ದಿನಾಂಕ: ೨೩ನೇ ಜುಲೈ, ೨೦೨೪**

---

## ಸಮೂಹ – 'ಆ - B'

೧. ಮಾನ್ಯ ಮುಖ್ಯಮಂತ್ರಿಗಳು

೨. ಮಾನ್ಯ ಉಪ ಮುಖ್ಯಮಂತ್ರಿಗಳು

೩. ಮಾನ್ಯ ಗೃಹ ಸಚಿವರು

೪. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಮಾನ್ಯ ಅಬಕಾರಿ ಸಚಿವರು

೬. ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

## ಕನಕನಾಲ ಯೋಜನೆಯ ಮಂಜೂರಾತಿ

**ಶ್ರೀ ಬಸನಗೌಡ ತುರುವಿಹಾಳ್ (ಮಸ್ಕಿ) –**

೭೬ (೧೩೭೬) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಸ್ಕಿ ಮತಕ್ಷೇತ್ರದ ವ್ಯಾಪ್ತಿಗೆ ಹೊಂದಿಕೊಂಡಿರುವ ಕುಷ್ಟಗಿ ತಾಲ್ಲೂಕಿನ ಗಡಿ ಭಾಗದಲ್ಲಿ ಬರುವ ಕೃಷ್ಣಾ ನದಿ ಕಾಲುವೆ ಮೂಲಕ ಕನಕನ ಕೆರೆಗೆ ನೀರು ತುಂಬಿಸಿ ಇಲ್ಲಿನ ದನ–ಕರುಗಳಿಗೆ, ಪ್ರಾಣಿ–ಪಕ್ಷಿಗಳಿಗೆ ಕುಡಿಯಲು ನೀರು ಹಾಗೂ ರೈತರ ಜಮೀನುಗಳಿಗೆ ನೀರೊದಗಿಸುವ ಕನಕನಾಲ ಯೋಜನೆಗೆ ಅಂದಾಜು ೧೩೪.೫೬ ಕೋಟಿ ರೂ.ಗಳ ಅನುದಾನವನ್ನು ಮಂಜೂರು ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

(ಇ) ಯಾವ ಕಾಲಮಿತಿಯಲ್ಲಿ ಈ ಅನುದಾನ ಮಂಜೂರು ಮಾಡಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು?

## ಅನುದಾನ ಮಂಜೂರಾತಿ

**ಶ್ರೀಮತಿ ಕರೆಮ್ಮ (ದೇವದುರ್ಗ) –**

೭೭ (೧೩೭೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದೇವದುರ್ಗ ತಾಲ್ಲೂಕಿನಲ್ಲಿ ಇತಿಹಾಸ ಮತ್ತು ಪುರಾಣ ಪ್ರಸಿದ್ಧವಾದ ಹಲವು ಸ್ಥಳಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ದೇವದುರ್ಗ ಗ್ರಾಮದಲ್ಲಿರುವ ಶ್ರೀ ಶರಣ ಅಮಾತೇಶ್ವರರ ದೇವಸ್ಥಾನ, ಗೂಗಲ್ ಗ್ರಾಮದ ಕೃಷ್ಣಾ ನದಿಯ ತಟದಲ್ಲಿರುವ ಅಲ್ಲಮ ಪ್ರಭುಲಿಂಗೇಶ್ವರ ದೇವಸ್ಥಾನಗಳನ್ನು ಪ್ರವಾಸಿ ತಾಣಗಳನ್ನಾಗಿ ಮಾರ್ಪಡಿಸಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಹಾಗಿದ್ದಲ್ಲಿ, ಈ ಸ್ಥಳಗಳನ್ನು ಯಾವ ಕಾಲಮಿತಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದು;

(ಈ) ಈ ಸ್ಥಳಗಳನ್ನು ಪ್ರಮುಖ ಪ್ರವಾಸಿ ಯಾತ್ರಾ ಸ್ಥಳಗಳನ್ನಾಗಿ ಮಾಡಲು ಸರ್ಕಾರ ಯಾವ ಕಾಲಮಿತಿಯಲ್ಲಿ ನೀಲನಕ್ಷೆ ತಯಾರಿಸಿ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು?

## ಎತ್ತಿನ ಹೊಳೆ ನೀರು ತುಂಬಿಸುವ ಯೋಜನೆ

**ಶ್ರೀ ವಿಶ್ವನಾಥ್ ಎಸ್ ಆರ್ (ಯಲಹಂಕ) –**

೭೮ (೧೨೭೭) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಎತ್ತಿನ ಹೊಳೆ ನೀರನ್ನು ಬೆಂಗಳೂರಿನ ಹೆಸರಘಟ್ಟ ಕೆರೆಗೆ ಹರಿಸುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿದೆಯೇ; ಹಾಗಿದ್ದರೆ, ಸರ್ಕಾರವು ಕೈಗೊಂಡ ಕ್ರಮಗಳೇನು; ಎಷ್ಟು ಪ್ರಮಾಣದ ನೀರನ್ನು ಈ ಕೆರೆಗೆ ಹರಿಸಲಾಗುತ್ತದೆ;

(ಆ) ಈ ಕೆರೆಗೆ ಎತ್ತಿನಹೊಳೆ ನೀರನ್ನು ಯಾವ ಕಾಲಮಿತಿಯಲ್ಲಿ ಹರಿಸಲಾಗುವುದು; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಈ ಕೆರೆಯ ಹೂಳನ್ನು ಎಷ್ಟು ವರ್ಷಗಳ ಹಿಂದೆ ತೆಗೆಯಲಾಗಿತ್ತು; ಇಲ್ಲವಾದಲ್ಲಿ, ಈ ಕೆರೆಯ ಹೂಳನ್ನು ತೆಗೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಕೆರೆಯ ಹೂಳು ತೆಗೆಯಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)

## ನೀರು ಹಂಚಿಕೆಯಲ್ಲಿನ ತಾರತಮ್ಯ

**ಶ್ರೀ ಮಹೇಂದ್ರ ಕಲ್ಲಪ್ಪ ತಮ್ಮಣ್ಣನವರ್ (ಕುಡಚಿ) –**

೭೯ (೧೭೪೦) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಿಡಕಲ್ ಜಲಾಶಯದ ಜಿ.ಎಲ್.ಬಿ.ಸಿ. ಕಾಲುವೆಯ ಒಟ್ಟು ನೀರಾವರಿ ಪ್ರದೇಶವೆಷ್ಟು ಮತ್ತು ಈ ಪ್ರದೇಶಗಳಿಗೆ ಹಂಚಿಕೆಯಾದ ನೀರಿನ ಪ್ರಮಾಣವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಕಾಲುವೆಯ ನೀರು ಹಂಚಿಕೆಯ ಕಳೆದ ಮೂರು ವರ್ಷಗಳ ವಿವರವನ್ನು ತಾಲ್ಲೂಕುವಾರು ನೀಡುವುದು;

(ಇ) ಈ ಕಾಲುವೆಯ ನೀರು ಹಂಚಿಕೆಯಲ್ಲಿ ತಾರತಮ್ಯ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

## ಪರಿಶಿಷ್ಟ ಪಂಗಡಗಳ ಕಾಲೋನಿಗಳ ಅಭಿವೃದ್ಧಿ

**ಡಾ॥ ಶೈಲೇಂದ್ರ ಬೆಲ್ದಾಳೆ (ಬೀದರ್ ದಕ್ಷಿಣ) –**

೮೦ (೧೮೨೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಿಂದ ೨೦೨೩–೨೪, ೨೦೨೪–೨೫ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಬಿಡುಗಡೆ ಮಾಡಲಾದ ಮೊತ್ತವೆಷ್ಟು; (ವಿವರ ಒದಗಿಸುವುದು)

(ಆ) ಈ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಮೂಲ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ಒದಗಿಸುವುದು)

(ಇ) ಈ ಕ್ಷೇತ್ರಕ್ಕೆ ೨೦೨೪–೨೫ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡ ಕಾಲೋನಿಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಎಷ್ಟು ಅನುದಾನ ಮಂಜೂರು ಮಾಡಲಾಗುವುದು? (ಸಂಪೂರ್ಣ ವಿವರ ಒದಗಿಸುವುದು)

## ಶ್ರೀ ಸಂಗಮೇಶ್ವರ ದೇವಾಲಯದ ಅಭಿವೃದ್ಧಿ

**ಶ್ರೀ ಸಂಗಮೇಶ್ವರ್ ಬಿ ಕೆ (ಭದ್ರಾವತಿ) –**

೮೧ (೧೫೭೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಭದ್ರಾವತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಭದ್ರಾ ನದಿಯ ತೀರದಲ್ಲಿ ಶ್ರೀ ಸಂಗಮೇಶ್ವರ ದೇವಾಲಯವಿದ್ದು, ಈ ದೇವಾಲಯವನ್ನು ಕೂಡಲ ಸಂಗಮ ಮಾದರಿಯಲ್ಲಿ ಪ್ರವಾಸೋದ್ಯಮ ತಾಣವನ್ನಾಗಿ ಅಭಿವೃದ್ಧಿ ಪಡಿಸಲು ಹಲವು ಬಾರಿ ಪ್ರಸ್ತಾವನೆಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ; (ಮಾಹಿತಿ ನೀಡುವುದು)

(ಆ) ಕೂಡಲ ಸಂಗಮ ಮಾದರಿಯಲ್ಲಿ ಈ ದೇವಾಲಯವನ್ನು ಪ್ರವಾಸೋದ್ಯಮ ತಾಣವನ್ನಾಗಿ ಅಭಿವೃದ್ಧಿ ಪಡಿಸಲು ಈಗಾಗಲೇ ಸರ್ವೆ ಕೂಡ ಮಾಡಲಾಗಿದ್ದು, ಇದು ಯಾವ ಹಂತದಲ್ಲಿದೆ; ಈ ಕಾಮಗಾರಿಯನ್ನು ಸರ್ಕಾರ ಯಾವ ಕಾಲಮಿತಿಯೊಳಗೆ ಪ್ರಾರಂಭ ಮಾಡುವುದು? (ಮಾಹಿತಿ ನೀಡುವುದು)

## ಖರ್ಚು ಮಾಡಲಾಗಿರುವ ಅನುದಾನದ ವಿವರ

**ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ) –**

೮೨ (೧೫೮೧) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೨೩–೨೪ ಹಾಗೂ ೨೦೨೪–೨೫ನೇ ಸಾಲಿನ ಆಯವ್ಯಯದಲ್ಲಿ ಕೃಷ್ಣಾ ಮೇಲ್ದಂಡೆ ಮತ್ತು ಕಾವೇರಿ ನೀರಾವರಿ ಯೋಜನೆಗಳಿಗೆ ಮೀಸಲಿಟ್ಟ ಅನುದಾನವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಮೀಸಲಿರಿಸಿದ ಈ ಅನುದಾನದ ಪೈಕಿ ಈವರೆಗೆ ಈ ನೀರಾವರಿ ಯೋಜನೆಗಳಿಗೆ ಖರ್ಚು ಮಾಡಿದ ಅನುದಾನವೆಷ್ಟು; (ಪ್ರತ್ಯೇಕವಾಗಿ ವಿವರ ನೀಡುವುದು)

(ಇ) ಈ ನೀರಾವರಿ ಯೋಜನೆಗಳಿಗಾಗಿ ಎಷ್ಟು ಜಮೀನನ್ನು ಭೂಸ್ವಾಧೀನ ಪಡಿಸಿ ಕೊಳ್ಳಲಾಗಿದೆ; ಭೂಮಿಯನ್ನು ಕಳೆದುಕೊಂಡ ರೈತರಿಗೆ ಇಲ್ಲಿಯವರೆಗೆ ಎಷ್ಟು ಪರಿಹಾರ ನೀಡಲಾಗಿದೆ; ಇನ್ನೂ ಎಷ್ಟು ರೈತರಿಗೆ ಎಷ್ಟು ಪರಿಹಾರ ನೀಡಬೇಕಾಗಿದೆ; ಪರಿಹಾರ ನೀಡಲು ಬಾಕಿಯಿರುವ ಹಣವೆಷ್ಟು? (ಯೋಜನೆವಾರು ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು)

## ಕೆರೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ

**ಶ್ರೀ ಉಮಾನಾಥ ಕೋಟ್ಯಾನ್ (ಮೂಡಬಿದ್ರೆ) –**

೮೩ (೧೩೪೪) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿರುವ ನೈಸರ್ಗಿಕ ಜಲಸಂಪನ್ಮೂಲಗಳು, ಕೆರೆಗಳು, ಧಾರ್ಮಿಕ ವಲಯದಲ್ಲಿರುವ ಕೆರೆಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸುವಲ್ಲಿ ಕರ್ನಾಟಕ ಕೆರೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದವರು ಕೈಗೊಂಡ ಕ್ರಮಗಳು ಯಾವುವು; ಎಷ್ಟು ಕೆರೆಗಳನ್ನು ಗುರುತಿಸಿ ಅಭಿವೃದ್ಧಿಗೊಳಪಡಿಸುವ ಕೆಲಸಕಾರ್ಯಗಳನ್ನು ಪ್ರಾಧಿಕಾರದ ವತಿಯಿಂದ ಕೈಗೊಳ್ಳಲಾಗಿದೆ;

(ಆ) ಮೂಡುಬಿದರೆ/ಮೂಲ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿ ಗಣನೀಯ ಸಂಖ್ಯೆಯಲ್ಲಿ ಕೆರೆಗಳು ಇದ್ದು ಅವುಗಳನ್ನು ಗುರುತಿಸಿ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಪ್ರಾಧಿಕಾರದವರು ಕೈಗೊಂಡ ಕ್ರಮಗಳೇನು;

(ಇ) ಕುಡಿಯುವ ನೀರು, ಕೃಷಿ, ತೋಟಗಾರಿಕೆಗೆ ಬೇಕಾಗುವ ನೀರಿನ ಕೊರತೆಯನ್ನು ಎದುರಿಸುತ್ತಿರುವ ಪ್ರದೇಶಗಳಲ್ಲಿ ಆದ್ಯತೆ ಮೇರೆಗೆ ಇರುವ ಕೆರೆಗಳನ್ನು ಗುರುತಿಸುವುದು ಮತ್ತು ಒತ್ತುವರಿ ಆಗಿರುವ ಕೆರೆಗಳ

ಪ್ರದೇಶವನ್ನು ತೆರವುಗೊಳಿಸುವುದು, ಕೆರೆಗಳಲ್ಲಿನ ಹೂಳೆತ್ತುವುದು, ಮುಂತಾದ ಕ್ರಮಗಳ ಮೂಲಕ ಕೆರೆಗಳ ಅಭಿವೃದ್ಧಿಗೆ ಮುಂದಾಗುವಲ್ಲಿ ಪ್ರಾಧಿಕಾರದವರ ಆದ್ಯತಾ ಕ್ರಮಗಳು ಯಾವುವು?

## ಎಂ.ಎಸ್.ಐ.ಎಲ್ ಮದ್ಯದ ಮಳಿಗೆ

**ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ ಬಿ (ಶ್ರೀರಂಗಪಟ್ಟಣ) –**

೮೪ (೧೭೧೨) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆಗೆ ಹೊಸದಾಗಿ ಎಂ.ಎಸ್.ಐ.ಎಲ್ ಮದ್ಯದ ಮಳಿಗೆಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

(ಆ) ಈ ಜಿಲ್ಲೆಯಲ್ಲಿ ಎಷ್ಟು ಎಂ.ಎಸ್.ಐ.ಎಲ್. ಮಳಿಗೆಗಳು ಚಾಲ್ತಿಯಲ್ಲಿವೆ; ಪ್ರತಿ ಮಳಿಗೆಯಿಂದ ಆದ ವ್ಯಾಪಾರ ಮತ್ತು ಲಾಭದ ಕುರಿತು ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು?

## ಎತ್ತಿನ ಹೊಳೆ ಯೋಜನೆಯಿಂದ ಕೆರೆಗಳಿಗೆ ನೀರು ಹರಿಸುವುದು

**ಶ್ರೀ ಆನಂದ್ ಕೆ ಎಸ್ (ಕಡೂರು) –**

೮೫ (೧೩೨೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಡೂರು, ತರೀಕೆರೆ, ಚಿಕ್ಕಮಗಳೂರು, ಅರಸೀಕೆರೆ ಭಾಗದ ಭದ್ರಾ ಮೇಲ್ದಂಡೆಯ ವಿವಿಧ ನೀರಾವರಿ ಯೋಜನೆಗಳ ೩ ಮತ್ತು ೪ ನೇ ಹಂತದ ಕಾಮಗಾರಿಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು;

(ಆ) ಎತ್ತಿನ ಹೊಳೆ ಯೋಜನೆ ಮುಖಾಂತರ ಕಡೂರು ತಾಲ್ಲೂಕಿನ ವಿಷ್ಣುಸಮುದ್ರ ಕೆರೆಗೆ ನೀರು ತುಂಬಿಸಿ, ತಾಲ್ಲೂಕಿನ ಕಸಬಾ, ಸಿಂಗಟಗೆರೆ ಹೋಬಳಿಯ ಕೆರೆಗಳಿಗೆ ನೀರು ಹಾಯಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಈ ತಾಲ್ಲೂಕಿನಲ್ಲಿನ ಎಲ್ಲಾ ಕೆರೆಗಳಿಗೆ ನೀರು ಹಾಯಿಸಿ, ರೈತರಿಗೆ ಅನುಕೂಲ ಕಲ್ಪಿಸುವ ಯಾವ ಯಾವ ಯೋಜನೆಗಳು ಸರ್ಕಾರದ ಮುಂದಿವೆ?

## ಕೊಳವೆ ಬಾವಿಗಳು

**ಶ್ರೀ ಶಿವಲಿಂಗೇಗೌಡ ಕೆ ಎಂ (ಅರಸೀಕೆರೆ) –**

೮೬ (೧೮೮೯) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೯–೨೦ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖಾ ವತಿಯಿಂದ ಅರಸೀಕೆರೆ ಕ್ಷೇತ್ರದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ;

(ಆ) ಈ ಪೈಕಿ ಕೊರೆದಿರುವ ಎಷ್ಟು ಕೊಳವೆ ಬಾವಿಗಳಿಗೆ ಮೋಟಾರ್ ಮತ್ತು ಪಂಪ್ ವಿತರಿಸಲಾಗಿದೆ;

(ಇ) ಈ ಕೊಳವೆ ಬಾವಿಗಳಿಗೆ ಇದುವರೆಗೂ ವಿದ್ಯುತ್ ಸಂಪರ್ಕ ಕಲ್ಪಿಸದೆ ಫಲಾನುಭವಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ, ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ; ಬಾಕಿ ಉಳಿದಿರುವ ಕೊಳವೆ ಬಾವಿಗಳಿಗೆ ಇನ್ನೂ ವಿದ್ಯುತ್ ಸಂಪರ್ಕ ಕಲ್ಪಿಸದಿರಲು ಕಾರಣವೇನು; ಯಾವ ಕಾಲಮಿತಿಯಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು? (ಫಲಾನುಭವಿ ಹೆಸರಿನ ಸಹಿತ ಮಾಹಿತಿ ನೀಡುವುದು)

## ಬಿಡುಗಡೆಯಾದ ಅನುದಾನ

**ಡಾ॥ ಭರತ್ ಶೆಟ್ಟಿ ವೈ (ಮಂಗಳೂರು ನಗರ ಉತ್ತರ) –**

೮೭ (೧೩೧೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಒಂದು ವರ್ಷದ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವಾಸೋದ್ಯಮ ಇಲಾಖೆಯಿಂದ ಬಿಡುಗಡೆಯಾದ ಅನುದಾನ ಎಷ್ಟು; (ಮಾಹಿತಿ ನೀಡುವುದು)

(ಆ) ಪ್ರವಾಸೋದ್ಯಮ ಇಲಾಖೆಯಿಂದ ಈ ಜಿಲ್ಲೆಯಲ್ಲಿ ಗುರುತಿಸಲಾದ ಪ್ರವಾಸೋದ್ಯಮ ತಾಣಗಳು ಯಾವುವು; (ಪೂರ್ಣ ಮಾಹಿತಿ ಒದಗಿಸುವುದು)

(ಇ) ಗುರುತಿಸಲಾಗಿರುವ ಈ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಅನುದಾನವನ್ನು ಬಿಡುಗಡೆ ಮಾಡುವುದೇ;

(ಈ) ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)

## ವಿದ್ಯುತ್ ಇಂಜಿನಿಯರ್‌ಗಳು

**ಶ್ರೀ ಮಂಜು ಎ (ಅರಕಲಗೂಡು) –**

೮೮ (೧೭೨೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಒಟ್ಟು ಏತ ನೀರಾವರಿ ಯೋಜನೆಗಳೆಷ್ಟು;

(ಆ) ಜಲಸಂಪನ್ಮೂಲ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಇಂಜಿನಿಯರ್‌ಗಳ ಸಂಖ್ಯೆ ಎಷ್ಟು ಮತ್ತು ಯಾವ ಆಧಾರದಲ್ಲಿ ಇವರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ;

(ಇ) ರಾಜ್ಯದಲ್ಲಿ ಜಲಸಂಪನ್ಮೂಲ ಇಲಾಖೆಯ ನೀರಾವರಿ ಯೋಜನೆಗಳು ಕಾರ್ಯರೂಪದಲ್ಲಿದ್ದು, ಅದರ ಮೇಲುಸ್ತುವಾರಿ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ವಿದ್ಯುತ್ ಇಂಜಿನಿಯರ್‌ಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

(ಈ) ಜಲಸಂಪನ್ಮೂಲ ಇಲಾಖೆಗೆ ಮೋಟಾರು ಮತ್ತು ವಿದ್ಯುತ್ ಸಂಪರ್ಕ ನಿರ್ವಹಣೆ ಅತ್ಯವಶ್ಯಕವಾಗಿರುವುದರಿಂದ ಇದುವರೆಗೆ ಈ ವಿದ್ಯುತ್ ಇಂಜಿನಿಯರ್‌ಗಳನ್ನು ನೇಮಕಾತಿ ಮಾಡಿಕೊಳ್ಳದಿರಲು ಕಾರಣವೇನು?

## ನಾರ್ವೆ ಏತ ನೀರಾವರಿ ಯೋಜನೆಗೆ ಅನುಮೋದನೆ

**ಶ್ರೀ ಸುರೇಶ್ ಹೆಚ್ ಕೆ (ಬೇಲೂರು) –**

೮೯ (೧೫೮೭) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೇಲೂರು ವಿಧಾನಸಭಾ ಕ್ಷೇತ್ರದ ಬೇಲೂರು ತಾಲ್ಲೂಕಿನ ಕುಡಿಯುವ ನೀರು ಮತ್ತು ಅಂತರ್ಜಲ ಹೆಚ್ಚಿಸಲು ನಾರ್ವೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಕಸಬಾ, ಹಳೇಬೀಡು ಹೋಬಳಿಗಳ ೬೧ ಕೆರೆಗಳಿಗೆ ನೀರು ತುಂಬಿಸುವ ಮಹತ್ವದ ನಾರ್ವೆ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ರೈತರ ಹಿತದೃಷ್ಟಿಯಿಂದ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನವನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ಪೂರ್ಣ ವಿವರ ನೀಡುವುದು)

(ಆ) ಈ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರೈತರುಗಳ ಜಮೀನುಗಳಲ್ಲಿ ಅಂತರ್ಜಲ ಮಟ್ಟ ಅಭಿವೃದ್ಧಿಪಡಿಸಲು ಮತ್ತು ರೈತರುಗಳ ಜಮೀನುಗಳಿಗೆ ಹೋಗಿ ಬರಲು ರಸ್ತೆ ಸಂಪರ್ಕ ಮತ್ತು ಹಳ್ಳಿಗಳ ಮಧ್ಯೆ ರಸ್ತೆ ಸಂಪರ್ಕಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಚೆಕ್ ಡ್ಯಾಂ ಮತ್ತು ಕ್ರಾಸ್‌ವೇ ಕಾಮಗಾರಿ ನಿರ್ವಹಿಸಲು ಹಿಂದಿನ ಸರ್ಕಾರದಲ್ಲಿ ಅನುಮೋದನೆಗೊಂಡು ತಡೆ ಹಿಡಿಯಲಾಗಿದ್ದ ರೂ. ೭೪೦ ಲಕ್ಷಗಳಲ್ಲಿ ಕಳೆದ ಏಪ್ರಿಲ್ ಮಾಹೆಯಲ್ಲಿ ರೂ. ೪೪೦.೦೦ ಲಕ್ಷಗಳು ಬಿಡುಗಡೆ ಹೊಂದಿದ್ದು, ಬಾಕಿ ಉಳಿದ ಮೊತ್ತ ರೂ. ೩೦೦.೦೦ ಲಕ್ಷಗಳನ್ನು ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ವಿವರ ನೀಡುವುದು)

# ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಳಿಸುವುದು

**ಶ್ರೀ ಸುರೇಶ್ ಗೌಡ ಬಿ (ತುಮಕೂರು ಗ್ರಾಮಾಂತರ) –**

೯೦ (೧೮೮೨) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಎತ್ತಿನಹೊಳೆ ಯೋಜನೆಯಲ್ಲಿ ತುಮಕೂರು, ಚಿತ್ರದುರ್ಗ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಹರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಜಿಲ್ಲೆಗಳಿಗೆ ನೀರು ಹರಿಸಲು ಸರ್ಕಾರ ಕ್ರಮ ಕೈಗೊಳ್ಳುವುದು;

(ಆ) ಈ ಯೋಜನೆ ಪ್ರಾರಂಭವಾಗಿ ಹತ್ತು ವರ್ಷ ಕಳೆದಿದ್ದರೂ ಸಹ ಈ ಯೋಜನೆ ಪೂರ್ಣವಾಗದಿರುವುದರಿಂದ, ಯಾವ ಕಾಲಮಿತಿಯೊಳಗೆ ಈ ಯೋಜನೆ ಪೂರ್ಣಗೊಳ್ಳುವುದು;

(ಇ) ಈ ಯೋಜನೆಯಡಿ ತುಮಕೂರು ಗ್ರಾಮಾಂತರ ಕ್ಷೇತ್ರದ ದುರ್ಗದಹಳ್ಳಿ, ಹಾಲಗೊಂಡನಹಳ್ಳಿ, ತಿಮ್ಮನಾಯಕನಹಳ್ಳಿ, ಕುಂಬರಹಳ್ಳಿ ಮತ್ತು ಅನುಪನಹಳ್ಳಿ ಕೆರೆಗಳಿಗೆ ನೀರು ಹರಿಸಲು ಕ್ರಿಯಾ ಯೋಜನೆಯಲ್ಲಿ ಸೇರ್ಪಡೆ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕೆರೆಗಳನ್ನು ಈ ಯೋಜನೆಯಡಿ ಸೇರ್ಪಡೆ ಮಾಡದಿರಲು ಕಾರಣವೇನು?

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು ಕಾ.ಸೂ–255 ಪ್ರತಿಗಳು – ಪಿ6

**List of Questions**
**for Oral Answers**

**Total No. of**
**Questions - 15**

# LIST - 06

# KARNATAKA LEGISLATIVE ASSEMBLY

## SIXTEENTH ASSEMBLY

## FOURTH SESSION

## Tuesday, 23rd July, 2024

---

### GROUP - 'B'

1. Hon'ble Chief Minister
2. Hon'ble Deputy Chief Minister
3. Minister for Home
4. Minister for Law, Parliamentary Affairs and Legislation, Tourism
5. Minister for Excise
6. Minister for Minor Irrigation, Science and Technology

---

### SANCTION OF KANAKANALA PROJECT

**SRI BASANAGOUDA THURUVIHAL (MUSKI) -**

76 (1376) Will the Deputy Chief Minister be pleased to state:-

a) whether it has come to the notice of the Government that around Rs.134.56 crores grant has to be sanctioned for the Kanakanala project to provide drinking water to the cattle, animals, birds and to irrigate the farmers lands by filling water to Kanakanala lake through the Krishna river canal in the border of Kushtagi taluk comes in the limits of Muski Assembly Constituency;

b) if so, the steps taken by the Government in this regard;

c) the time by which the said grant would be sanctioned and implement this project?

## SANCTION OF GRANT

**SMT. KAREMMA (DEVADURGA) -**

77 (1378) Will the Minister for Law, Parliamentary Affairs and Legislation, Tourism be pleased to state:-

a) whether it has come to the notice of the Government that Devadurga taluk has many places famous for historical and mythological significance;

b) if so, whether there is a proposal before the Government to develop sri Sharana Amaatheshwara temple at Devadurga village, and Allama Prabhulingeshwara temple located on the bank of Krishna river at Google village as tourist destinations;

c) if so, the time by which these places would be developed;

d) the time limit within which the Government would prepare a blue print and release the grant to develop these places as major tourist spots?

## FILLING OF WATER BY YETTINAHOLE PROJECT

**SRI VISHWANATH S.R. (YELAHANKA) -**

78 (1277) Will the Deputy Chief Minister be pleased to state:-

a) whether a proposal to fill the water in Hesara Ghatta Lake in Bangalore by Yettinahole project is at the Government level; if so, the steps taken by the Government; the volume of water will be released to this lake;

b) the time by which the Yettinahole water will be released to this lake; (complete information be furnished)

c) how many years ago was this lake silt removed; if not, whether there is a proposal before the Government to remove the silt of this lake; if so, the steps taken by the Government to remove the silt of this lake? (details be furnished)

## DISCRIMINATION IN WATER DISTRIBUTION

**SRI MAHENDRA KALLAPPA THAMMANNANAVAR (KUDACHI)-**

79 (1740) Will the Deputy Chief Minister be pleased to state:-

a) the total irrigated area of the G.L.B.C canal of Hidkal Reservoir and the volume of water allocated to these areas; (taluk-wise information be furnished)

b) the taluk-wise details of water allocation of this canal for the last three years be furnished;

c) whether the Government has noticed that discrimination is being caused in distribution of water in this canal; if so, the steps taken by the Government?

## DEVELOPMENT OF SCHEDULED TRIBES COLONIES

**Dr. SHAILENDRA BELDALE (BIDAR SOUTH) -**

80 (1821) Will the Chief Minister be pleased to state:-

a) the quantum of amount released under various schemes by Scheduled Tribes welfare department for Bidar South Assembly Constituency during the years 2023-24, 2024-25; (details be furnished)

b) whether it has come to the notice of the Government that there is lack of basic facilities in the scheduled tribe colonies coming in the limits of this Constituency; if so, the steps taken by the Government for the development of basic facilities; (complete details be furnished)

c) the quantum of grant would be sanctioned for the development of infrastructure in the Scheduled tribe colonies of this constituency for the year 2024-25? (complete details be furnished)

## RESTORATION OF SRI SANGAMESHWARA TEMPLE

**SRI SANGAMESHWARA B.K. (BHADRAVATHI) -**

81(1572) Will the Minister for Law, Parliamentary Affairs and Legislation and Tourism be pleased to state :-

a) sri Sangameshwara temple is located on the banks of Bhadra river coming under in the limits of Bhadravathi assembly constituency, whether it has come to the notice of the Government that proposals have been submitted many times to develop this temple as a tourist spot in the model of Kudala Sangama; if so, the present stage of the said proposal; (information be furnished)

b) the survey has already been done to develop this temple as a tourist spot in model of Kudala Sangama, the present stage of the same; the time limit within which the Government will commence this work? (information be furnished)

**DETAILS OF GRANT SPENT**

**SRI BASANAGOUDA R. PATIL (YATNAL) (VIJAYAPURA CITY)-**

82(1581) Will the Deputy Chief Minister be pleased to state:-

a) the amount of grant earmarked for upper Krishna and Cauvery irrigation projects in the budget for the years 2023-24 and 2024-25; (complete information be furnished)

b) out of this grant, the amount of grant spent on these irrigation projects so far; (separate details be furnished)

c) the extant of land has been acquired for these irrigation projects; the amount of compensation given to the farmers who lost their land so far; how many farmers still need to receive how much compensation; the quantum of amount is pending to provide compensation? (project-wise complete information be furnished)

**CONSERVATION AND DEVELOPMENT OF LAKES**

**SRI UMANATHA A. KOTIAN (MOODABIDRI) -**

83 (1344) Will the Minister for Minor Irrigation, Science and Technology be pleased to state :-

a) the particulars of steps taken by the Karnataka lakes conservation and development authority to identify and development of the natural water resources, lakes, and the lakes maintained by the religious institutions in the limits of Dakshina Kannada district; the number lakes have been identified and developed by the authority;

b) there are a considerable number of lakes in the limits of Moodabidare/Mulki constituency, the steps taken by the authority in order to identify and develop the same;

c) the particulars of the priority measures taken by the authority for the development of lakes by identifying the lakes in the areas where there is a scarcity of water for drinking, agriculture, horticulture and by vacating encroachment of lakes, de silting the lakes, etc?

## MSIL LIQUOR OUTLETS

**SRI RAMESH BANDISIDDEGOWDA A.B. (SRIRANGAPATTANA)-**

84 (1712) Will the Minister for Excise be pleased to state :-

a) whether the Government has the intention to sanction new M.S.I.L liquor outlets to Mandya district;

b) the number of M.S.I.L outlets are functioning in this district; constituency wise information be furnished about business and profit from each outlet?

## FILLING OF LAKES BY YETTINAHOLE PROJECT

**SRI ANAND K.S. (KADUR) -**

85 (1323) Will the Deputy Chief Minister be pleased to state:-

a) the time by when the 3rd and 4th phase works of various irrigation projects of Upper Bhadra in Kaduru, Tharikere, Chikkamagaluru, Arasikere would be taken up;

b) whether there is a proposal before the Government to fill the Vishnusamudra lake of Kaduru taluk by Yettinahole project and release water to Kasaba, Singatagere hobli lakes of the taluk;

c) the particulars of projects are before the Government to fill water to all the lakes in this taluk and facilitate farmers?

## BOREWELLS

**SRI SHIVALINGE GOWDA K.M. (ARASIKERE) -**

86 (1889) Will the Minister for Minor Irrigation, Science and Technology be pleased to state :-

a) the number of borewells that have been drilled by Minor irrigation department in Arasikere assembly constituency during the year 2019-20;

b) out of it, the number of borewells for which the motor and pumps have been distributed;

c) whether it has come to the notice of the Government that beneficiaries are facing problems due to not providing electricity connection to said borewells;

d) if so, the number of borewells that have been provided electricity connection so far; the reason for not providing electricity connection to remaining borewells; the time limit within which electricity connection would be provided? (information along with beneficiaries names be furnished)

## GRANT RELEASED

**Dr. BHARATH SHETTY Y. (MANGALORE CITY NORTH) -**

87 (1311) Will the Minister for Law, Parliamentary Affairs and Legislation and Tourism be pleased to state :-

a) the quantum of grant released by the Tourism department during last one year to Dakshina Kannada district; (information be furnished)

b) the particulars of tourist destinations identified by Tourism department in the said district; (complete information be furnished)

c) whether the Government would release the grant to develop these identified destinations;

d) if not, reasons therefor? (details be furnished)

## ELECTRICAL ENGINEERS

**SRI MANJU A. (ARAKALGUD) -**

88 (1723) Will the Deputy Chief Minister be pleased to state:-

a) the total number lift irrigation projects are currently going on in the State;

b) the number of electrical engineers are working in Water resources department and the basis on which these employees are performing their duties;

c) whether it would not come to the notice of the Government that there is a need for electrical engineers for supervision and management of ongoing irrigation projects of the Water resources department in the state;

d) the reasons for electrical engineers have not been recruited so far as the maintenance of motor and electrical connection is essential for Water resources department?

## APPROVAL FOR NORWAY LIFT IRRIGATION PROJECT

**SRI SURESH H.K. (BELUR) -**

89 (1587) Will the Minister for Minor Irrigation, Science and Technology be pleased to state :-

a) whether there is a proposal before the Government to take up Norway lift irrigation project for the purpose of drinking water, augmentation of ground water level and filling up of 61 lakes of Kasaba and Halebeedu hobli in Belur taluk of Belur assembly constituency by lifting water from Hemavathi river; if so, the steps taken by the Government to accord administrative approval and sanction the grant for the said project in the interest of the farmers; (complete details be furnished)

b) Rs. 440.00 lakhs has been released in the last month of April out of the Rs.740.00 lakhs that had been approved

but withheld by the previous Government for augmentation of ground water on the farmers land and constructing check dams and crossways in order to provide road connectivity to farmers land and road connectivity between villages in the limits of this assembly constituency; the steps taken by the Government to release the outstanding amount of 300.00 lakhs? (complete details be furnished)

**INCLUSION OF LAKE FILLING WORK IN ACTION PLAN**

**SRI SURESH GOWDA B. (TUMKUR RURAL) -**

90 (1882) Will the Deputy Chief Minister be pleased to state :-

a) whether there is a proposal before the Government to supply water to Tumkur, Chitradurga, Kolar and Chikkaballapura districts under Yettinahole project; if so, the time limit within which the Government will take steps to provide water to said districts;

b) the time by when this project would be completed as this project has not been completed even though ten years have passed since its inception;

c) whether it has come to the notice of the Government that the lake filling work of Durgadahalli, Halagondanahalli, Thimmanayakanahalli, Kumbarahalli and Anuponahalli lakes of Tumkur rural assembly constituency have not been included in the action plan; if so, the reason for not inclusion of these lakes under this project?

**M.K. Vishalakshi**
Secretary
Karnataka Legislative Assembly

Government Press, Vikasa Soudha Unit, Bengaluru, WD-277 Copies